# 2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಮದ್ದೂರು.

ಉಪಸ್ಥಿತರು ಃ-ಶ್ರೀ **ಕೋನಪ್ಪ ಎನ್.ವಿ.,** ಬಿ.ಎ.ಎಲ್, ಎಲ್.ಎಲ್.ಬಿ.,
2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಮದ್ದೂರು.

ದಿನಾಂಕ **22** ನೇ ಜನವರಿ **2025**

ಅಸಲು ದಾವಾ ಸಂಖ್ಯೆಃ **09/2024**

ವಾದಿ ಃ- ಮರಂಕೇಗೌಡ ಎ ಎಸ್ ಬಿನ್ ಲೇ.ಸಿದ್ದೇಗೌಡ,
ವಯಸ್ಸು ಸುಮಾರು 59 ವರ್ಷ,
ವಾಸಃ ಅಣ್ಣೂರು ಗ್ರಾಮ, ಸಿ ಎ ಕೆರೆ ಹೋಬಳಿ,
ಮದ್ದೂರು ತಾಲ್ಲೂಕು.

<u>ವಿರುದ್ಧ</u>

ಪ್ರತಿವಾದಿಃ- **1.** ಎ ಬೋರಯ್ಯ ಬಿನ್ ಲೇ.ಜೋಗೀಗೌಡ,
ವಯಸ್ಸು ಸುಮಾರು 85 ವರ್ಷ,

**2.** ಬಿ.ದೇವರಾಜು ಬಿನ್ ಎ ಬೋರಯ್ಯ,
ವಯಸ್ಸು ಸುಮಾರು 42 ವರ್ಷ,

ಇಬ್ಬರ ವಾಸಃ ಅಣ್ಣೂರು ಗ್ರಾಮ,
ಸಿ ಎ ಕೆರೆ ಹೋಬಳಿ, ಮದ್ದೂರು ತಾಲ್ಲೂಕು.

<u>ಮಧ್ಯಕಾಲಿನ ಅರ್ಜಿ ಸಂಖ್ಯೆ-1</u>

ಅರ್ಜಿದಾರರು ಃ- ಮರಂಕೇಗೌಡ ಎ ಎಸ್

*(ಪ್ರತಿನಿಧಿಸುವವರು ಶ್ರೀ.ಹೆಚ್. ಆರ್., ವಕೀಲರು)*

<u>ವಿರುದ್ಧ</u>

ಎದುರುದಾರರು ಃ- ಎ ಬೋರಯ್ಯ ಮತ್ತು ಇನ್ನೊಬ್ಬರು

*(ಪ್ರತಿನಿಧಿಸುವವರು ಶ್ರೀ.ಎಂ.ಜೆ.ಎಸ್., ವಕೀಲರು)*

<u>ವಾದಿಯು ಸಲ್ಲಿಸಿರುವ ದಿವಾಣಿ ಪ್ರಕ್ರಿಯೆ ಸಂಹಿತೆ ಕ್ರಮಾದೇಶ **39** ನಿಯಮ **1** ಮತ್ತು **2** ಸಹವಾಚಕ ಕಲಂ **151** ರ ಮಧ್ಯಕಾಲಿನ ಅರ್ಜಿ ಸಂಖ್ಯೆ **1** ರ ಮೇಲಿನ ಆದೇಶ</u>

ವಾದಿಯು ದಿವಾಣಿ ಪ್ರಕ್ರಿಯೆ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ಸಹವಾಚಕ ಕಲಂ 151 ರಡಿಯಲ್ಲಿ ಮಧ್ಯಂತರ ಅರ್ಜಿ ಸಂಖ್ಯೆ 1 ನ್ನು ಸಲ್ಲಿಸಿ, ಪ್ರತಿವಾದಿಗಳು ದಾವಾ ಅನುಸೂಚಿ ಸ್ವತ್ತನ್ನು 3 ನೇ ವ್ಯಕ್ತಿಗಳಿಗೆ ಮಾರಾಟ, ಕ್ರಯ, ಭೋಗ್ಯ, ಅಡಮಾನ ಇನ್ನಿತರೆ ರೀತಿಯ ವರ್ಗಾವಣೆಯನ್ನು ಮಾಡದಂತೆ ದಾವೆ ಇತ್ಯರ್ಥ ಆಗುವ ತನಕ ತಾತ್ಕಾಲಿಕ ತಡೆಯಾಜ್ಞೆ ಆದೇಶವನ್ನು ನೀಡಬೇಕೆಂದು ಕೋರಿ ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ.

**2.** ಅರ್ಜಿದಾರರು ತಮ್ಮ ಅರ್ಜಿಯ ಜೊತೆ ಲಗತ್ತಿಸಿರುವ ಪ್ರಮಾಣ ಪತ್ರದಲ್ಲಿ, ಈ ದಾವೆಯನ್ನು ವಾದಿ ಪ್ರತಿವಾದಿಗಳ ವಿರುದ್ಧ ಘೋಷಣೆ ಮತ್ತು ಶಾಶ್ವತ ತಡೆಯಾಜ್ಞೆಯನ್ನು ಕೋರಿ ಸಲ್ಲಿಸಿರುತ್ತಾರೆ. ದಾವಾ ಸ್ವತ್ತು ವಾದಿಯ ಪಿತ್ರಾರ್ಜಿತ ಆಸ್ತಿಯಾಗಿರುತ್ತದೆ. ಸದರಿ ಆಸ್ತಿಯನ್ನು ವಾದಿ ಮತ್ತು ಅವರ ಸಹೋದರರು ಬಾಯಿ ಮಾತಿನ ಮೂಲಕ ವಿಭಾಗ ಮಾಡಿಕೊಂಡಿರುತ್ತಾರೆ. ದಾವಾ ಸ್ವತ್ತಿನ ಆರ್ ಆರ್ ವಾದಿಯ ತಾತ ಕಾಳೇಗೌಡನ ಸಿದ್ದೇಗೌಡನ ಮಗ ಅಂಕೇಗೌಡ ರವರ ಹೆಸರಿನಲ್ಲಿ ಇರುತ್ತದೆ. ವಾದಿಯ ತಾತ ಮತ್ತು ಅವರ ತಂದೆ ಅವಿದ್ಯಾವಂತರಾದ ಕಾರಣ ದಾವಾ ಆಸ್ತಿಯ ಆರ್ ಟಿ ಸಿ ಅವರ ಹೆಸರಿನಲ್ಲಿ ಬರುತ್ತಿದೀಯಾ ಅಥವಾ ಇಲ್ಲವಾ ಎಂಬುದನ್ನು ಅವರಿಗೆ ಗೊತ್ತಿರುವುದಿಲ್ಲ. ಆದರೆ ಸುಮಾರು 100 ವರ್ಷಗಳಿಂದ ದಾವಾ ಆಸ್ತಿಯಲ್ಲಿ ವಾದಿಗಳೆ ಸ್ವಾಧೀನ ಮತ್ತು ಅನುಭವದಲ್ಲಿದ್ದಾರೆ. ವಾದಿಯು ಮುಂದುವರೆದು ತಿಳಿಯಪಡಿಸುವುದೇನೆಂದರೆ ದಾವಾ ಸ್ವತ್ತಿನ ಪಕ್ಕದಲ್ಲಿ ಸರ್ವೆ ನಂಃ 78/6 ರಲ್ಲಿ 1 ಎಕರೆ 7 ಗುಂಟೆ ಮತ್ತು ಸರ್ವೆ ನಂಃ 80/2 ರಲ್ಲಿ 13 ಗುಂಟೆ ವಾದಿಗೆ ಸೇರಿದ ಜಮೀನು ಇರುತ್ತದೆ. ಈ ಜಮೀನುಗಳ ಮಧ್ಯ ದಾವಾ ಆಸ್ತಿ ಇರುತ್ತದೆ. ಪ್ರತಿವಾದಿ 1 ರವರು ನಿವೃತ್ತ ಸರ್ಕಾರಿ ಪ್ರಾಧ್ಯಾಪಕರಾಗಿರುತ್ತಾರೆ. 2 ನೇ ಪ್ರತಿವಾದಿ 1 ನೆ ಪ್ರತಿವಾದಿಯ ಮಗನಾಗಿರುತ್ತಾರೆ. ದಾವಾ ಸ್ವತ್ತಿನ ಆರ್ ಟಿ ಸಿ ಪ್ರತಿವಾದಿಗಳ ಹೆಸರಿಗೆ ವರ್ಗಾವಣೆಯಾಗಿರುವುದು ನನಗೆ ತಿಳಿದು ಬಂದಿರುವುದಿಲ್ಲ. ವಾದಿಯ ಜಮೀನಿನ ಬಾಜುದಾರರನಾದ ಕುಳ್ಳೇಗೌಡ ಬಿನ್ ದ್ಯಾಪೇಗೌಡ ರವರು ತಮ್ಮ ಜಮೀನನ್ನು ಅಳತೆ ಮಾಡಿಸಲು ಕಂದಾಯ ಅಧಿಕಾರಿಗಳು ಬಂದ ಸಂದರ್ಭದಲ್ಲಿ ದಾವಾ ಸ್ವತ್ತು 1 ನೇ ಪ್ರತಿವಾದಿಯ ಹೆಸರಿನಲ್ಲಿರುವುದು ತಿಳಿದು ಬಂದಿರುತ್ತದೆ. ಆ ಸಮಯದಲ್ಲಿ ಸದರಿ ಕುಳ್ಳೇಗೌಡ ರವರು 1 ನೇ ಪ್ರತಿವಾದಿಗೆ ದಾವಾ ಸ್ವತ್ತನ್ನು ತನಗೆ ಮಾರಾಟ ಮಾಡು ಎಂದು ತಿಳಿಸಿರುತ್ತಾರೆ. ಆಗ 1 ನೇ ಪ್ರತಿವಾದಿ ದಾವಾ ಸ್ವತ್ತನ್ನು ನಿಮಗೆ ಮಾರಾಟ ಮಾಡಿದರೆ ನನಗೆ ತೊಂದರೆ ಆಗುತ್ತದೆ ಎಂದು ಹೇಳಿರುತ್ತಾರೆ. ನಂತರ ವಾದಿ ಮುಂದುವರೆದು ತಿಳಿಯಪಡಿಸುವುದೇನೆಂದರೆ 1 ನೇ ಪ್ರತಿವಾದಿ ದಿನಾಂಕ 28.06.2021 ರಂದು ದಾವಾ ಆಸ್ತಿಗೆ ಸಂಬಂಧಪಟ್ಟಂತೆ 2 ನೇ ಪ್ರತಿವಾದಿಯ ಹೆಸರಿಗೆ ಸುಳ್ಳು ದಾನಪತ್ರವನ್ನು ಸೃಷ್ಠಿ

ಮಾಡಿಕೊಟ್ಟಿರುತ್ತಾರೆ. ಸದರಿ ದಾನ ಪತ್ರವನ್ನು ದುರುಪಯೋಗಪಡಿಸಿಕೊಂಡು ಪ್ರತಿವಾದಿ 2 ರವರು ತನ್ನ ಹೆಸರಿಗೆ ದಾವಾ ಸ್ವತ್ತಿನ ದಾಖಲೆಗಳನ್ನು ವರ್ಗಾವಣೆ ಮಾಡಿಕೊಂಡು ಅದನ್ನು ಬೇರೆಯವರಿಗೆ ವರ್ಗಾವಣೆ ಮಾಡಲು ಪ್ರಯತ್ನಿಸುತ್ತಿದ್ದಾರೆ. ವಾದಿಗೆ ವಯಸ್ಸಾಗಿದ್ದು, ಪ್ರತಿವಾದಿಗಳ ಅಕ್ರಮ ಕೃತ್ಯವನ್ನು ತಡೆಯಲು ಶಕ್ತನಾಗಿರುವುದಿಲ್ಲ. ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಅನುಕೂಲತೆಯ ಒಲವು ವಾದಿಯ ಪರವಾಗಿರುತ್ತದೆ. ಈ ಅರ್ಜಿಯನ್ನು ಪುರಸ್ಕರಿಸಿದರೆ ಪ್ರತಿವಾದಿಗಳಿಗೆ ಯಾವುದೇ ತೊಂದರೆ ಉಂಟಾಗುವುದಿಲ್ಲ. ಒಂದು ವೇಳೆ ಈ ಅರ್ಜಿಯನ್ನು ವಜಾಗೊಳಿಸಿದರೆ ವಾದಿಗೆ ತುಂಬಲಾರದ ನಷ್ಟ ಉಂಟಾಗುತ್ತದೆ. ಆದ್ದರಿಂದ ಈ ಅರ್ಜಿಯನ್ನು ಪುರಸ್ಕರಿಸಬೇಕೆಂದು ವಾದಿಯು ಪ್ರಾರ್ಥಿಸಿಕೊಂಡಿರುತ್ತಾರೆ.

**3.** ಪ್ರತಿವಾದಿ 1 ಮತ್ತು 2 ರವರುಗಳ ಪರ ವಕೀಲರು ಒಂದು ಮೆಮೊ ಸಲ್ಲಿಸಿ ತಮ್ಮ ಪ್ರತಿವಾದ ಪತ್ರವನ್ನು ಮಧ್ಯಂತರ ಅರ್ಜಿ ಸಂಖ್ಯೆ 1 ರ ಮೇಲಿನ ತಕರಾರು ಎಂದು ಪರಿಗಣಿಸುವಂತೆ ಕೋರಿರುತ್ತಾರೆ. ಪ್ರತಿವಾದಿಗಳು ತಮ್ಮ ಪ್ರತಿವಾದ ಪತ್ರದಲ್ಲಿ 1 ನೇ ಪ್ರತಿವಾದಿ ಅಣ್ಣೂರು ಗ್ರಾಮದ ವಾಸಿಯಾಗಿರುತ್ತಾರೆ. ಆತನಿಗೆ ಸರ್ವೆ ನಂಃ 79 ರಲ್ಲಿ 6 ಗುಂಟೆ ಪಿತ್ರಾರ್ಜಿತವಾಗಿ ಬಂದಿರುವ ಆಸ್ತಿ ಇರುತ್ತದೆ. ಪ್ರತಿವಾದಿ 1 ರವರಿಗೆ 4 ಜನ ಮಕ್ಕಳು. 1 ನೇ ಜಯಲಕ್ಷ್ಮೀ, 2 ನೇಯವರು ಸರ್ವಮಂಗಳ, 3 ನೇಯವರು ದೇವರಾಜು, 4 ನೇಯವರು ಕುಮಾರ್. ಪ್ರತಿವಾದಿ 1 ರವರ ಯೋಗಕ್ಷೇಮವನ್ನು ಪ್ರತಿವಾದಿ 2 ರವರು ನೋಡಿಕೊಳ್ಳುತ್ತಿರುವ ಕಾರಣ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಮುಂದೆ ಯಾವುದೇ ವಿವಾದಗಳು ಉಂಟಾಗಬಾರದು ಎಂದು ಪ್ರತಿವಾದಿ 1 ರವರು ಸರ್ವೆ ನಂಃ 79 ವಿಸ್ತೀರ್ಣ 6 ಗುಂಟೆ ಜಮೀನನ್ನು ಪ್ರತಿವಾದಿ 2 ರವರಿಗೆ ದಾನ ಪತ್ರವನ್ನು ಬರೆದುಕೊಟ್ಟಿರುತ್ತಾರೆ. ಪ್ರತಿವಾದಿ 1 ರವರು ಮುಂದುವರೆದು ತಿಳಿಯಪಡಿಸುವುದೇನೆಂದರೆ ನಾನು ಮತ್ತು ನನ್ನ ಕುಟುಂಬದ ಸದಸ್ಯರು ಸುಮಾರು 65 ವರ್ಷಗಳಿಂದ ಅಣ್ಣೂರು ಗ್ರಾಮದ ಸರ್ವೆ ನಂಃ 79 ವಿಸ್ತೀರ್ಣ 6 ಗುಂಟೆಯಲ್ಲಿ ಉಳಿಮೆ ಮಾಡಿಕೊಂಡು ಅದರಲ್ಲಿ ಸ್ವಾಧೀನ ಮತ್ತು ಅನುಭವದಲ್ಲಿರುತ್ತೇವೆ. 1 ನೇ ಪ್ರತಿವಾದಿಗೆ ವಯಸ್ಸಾದ ಕಾರಣ ಸದರಿ ಸ್ವತ್ತನ್ನು ತನ್ನ ಮಗ ಪ್ರತಿವಾದಿ 2 ರವರ ಹೆಸರಿಗೆ ದಿನಾಂಕ 28.06.2021 ನೇ ಇಸವಿಯಲ್ಲಿ ದಾನ ಪತ್ರವನ್ನು ಬರೆದು ದಿನಾಂಕ 06.07.2021 ನೇ ಇಸವಿಯಲ್ಲಿ ನೊಂದಣಿ ಮಾಡಿಸಿರುತ್ತಾರೆ.

**4.** ಸದರಿ ದಾನ ಪತ್ರದಂತೆ ಪ್ರತಿವಾದಿ 2 ರವರ ಹೆಸರಿಗೆ ದಾವಾ ಆಸ್ತಿಗೆ ಸಂಬಂಧಟ್ಟ ಕಂದಾಯ ದಾಖಲೆಗಳು ಎಂ ಆರ್ ನಂಃ 4/2021-22 ರಂತೆ ವರ್ಗಾವಣೆಯಾಗಿರುತ್ತವೆ. ಅಂದಿನಿಂದ ಪ್ರತಿವಾದಿ 2 ರವರು ದಾವಾ ಸ್ವತ್ತಿನಲ್ಲಿ ಸ್ವಾದೀನ ಮತ್ತು ಅನುಭವವನ್ನು ಹೊಂದಿರುತ್ತಾರೆ. ಪ್ರತಿವಾದಿಗಳು ಮುಂದುವರೆದು ತಿಳಿಯಪಡಿಸುವುದೇನೆಂದರೆ

ತಹಶೀಲ್ದಾರವರು 1 ನೇ ಪ್ರತಿವಾದಿಯ ಮಗನಾದ 2 ನೇ ಪ್ರತಿವಾದಿಯ ಹೆಸರಿಗೆ ದಾವಾ ಆಸ್ತಿಯ ಖಾತೆಯನ್ನು ವರ್ಗಾವಣೆ ಮಾಡಿರುವ ಕ್ರಮವನ್ನು ಪ್ರಶ್ನಿಸಿ ವಾದಿ ಉಪವಿಭಾಗಾಧಿಕಾರಿಗಳ ನ್ಯಾಯಾಲಯ ಮಂಡ್ಯದಲ್ಲಿ ಆರ್ ಮಿಸ್ ನಂ: 495/2021 ರಂತೆ ಪ್ರಕರಣವನ್ನು ದಾಖಲಿಸಿರುತ್ತಾರೆ. ಉಪವಿಭಾಗಾಧಿಕಾರಿಗಳ ನ್ಯಾಯಾಲಯವು ದಿನಾಂಕ 07.02.2024 ರಂದು ಸದರಿ ಪ್ರಕರಣವನ್ನು ವಜಾಗೊಳಿಸಿರುತ್ತದೆ. ಅನುಕೂಲತೆಯ ಒಲವು ಪ್ರತಿವಾದಿಗಳ ಪರ ಇರುತ್ತದೆ. ವಾದಿ ಮೊದಲ ನೋಟಕ್ಕೆ ಸಮ್ಮತವಾದ ವಾದವನ್ನು ಮಂಡಿಸಿರುವುದಿಲ್ಲ. ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಯಾವುದೇ ದಾಖಲೆಗಳು ವಾದಿಯ ಹೆಸರಿನಲ್ಲಿ ಇರುವುದಿಲ್ಲ. ಒಂದು ವೇಳೆ ಈ ಅರ್ಜಿಯನ್ನು ಪುರಸ್ಕರಿಸಿದರೆ ಪ್ರತಿವಾದಿಗಳಿಗೆ ತುಂಬಲಾರದ ನಷ್ಟ ಉಂಟಾಗುತ್ತದೆ. ಈ ಅರ್ಜಿಯನ್ನು ವಜಾಗೊಳಿಸಿದರೆ ವಾದಿಗೆ ಯಾವುದೇ ನಷ್ಟ ಉಂಟಾಗುವುದಿಲ್ಲ. ಆದ್ದರಿಂದ ವಾದಿಯ ಈ ಅರ್ಜಿಯನ್ನು ಖರ್ಚು ಸಮೇತ ವಜಾಗೊಳಿಸಬೇಕೆಂದು ಕೋರಿಕೊಂಡಿರುತ್ತಾರೆ.

**5.** ಉಭಯ ಪಕ್ಷಗಾರರ ವಾದವನ್ನು ಆಲಿಸಿದ ನಂತರ ವಾದಿಯು ಸಲ್ಲಿಸಿರುವ ಮಧ್ಯಂತರ ಅರ್ಜಿಯ ನ್ಯಾಯೋಚಿತ ವಿಲೆಗಾಗಿ ಈ ಕೆಳಕಂಡ ಅಂಶಗಳು ಉದ್ಭವವಾಗಿರುತ್ತದೆ.

***1.*** ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ಪಡೆಯಲು ವಾದಿಯು ಮೊದಲ ನೋಟಕ್ಕೆ ಸಮ್ಮತವಾದ ವಾದವನ್ನು ತೋರ್ಪಡಿಸಿದ್ದಾರೆಯೇ ***?***

***2.*** ಅನುಕೂಲತೆಯ ಒಲವು ವಾದಿಯ ಪರವಾಗಿದೆಯೇ ***?***

***3.*** ಮಧ್ಯಂತರ ಅರ್ಜಿಯನ್ನು ವಜಾಗೊಳಿಸುವುದರಿಂದ ವಾದಿಗೆ ತುಂಬಲಾರದ ನಷ್ಟ ಮತ್ತು ಸರಿ ಪಡಿಸಲಾಗದ ಕ್ಷತಿಯುಂಟಾಗುತ್ತದೆಯೇ ***?***

***4.*** ಯಾವ ಆದೇಶ ***?***

**6.** ಇಬ್ಬರು ಪಕ್ಷಗಾರರ ಪರ ವಕೀಲರ ವಾದವನ್ನು ಆಲಿಸಲಾಯಿತು ಮತ್ತು ಕಡತದಲ್ಲಿರುವ ದಾಖಲಾತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಯಿತು. ಈ ನ್ಯಾಯಾಲಯವು ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸುತ್ತದೆ.

ಅಂಶ ***1*** ಃ ನಕಾರಾತ್ಮಕವಾಗಿ***,***
ಅಂಶ ***2*** ಃ ನಕಾರಾತ್ಮಕವಾಗಿ***,***
ಅಂಶ ***3*** ಃ ನಕಾರಾತ್ಮಕವಾಗಿ***,***
ಅಂಶ ***4*** ಃ ಈ ಕೆಳಕಂಡ ಕಾರಣಗಳಿಗಾಗಿ ಅಂತಿಮ ಆದೇಶದಂತೆ***,***

## <u>ಕಾರಣಗಳು</u>

**<u>7. ಅಂಶ 1 ರಿಂದ 3ಃ-</u>** ವಾದಿಯು ಈ ದಾವೆಯನ್ನು ಪ್ರತಿವಾದಿಗಳ ವಿರುದ್ಧ ಹಕ್ಕಿನ ಘೋಷಣೆಗಾಗಿ ಮತ್ತು ಶಾಶ್ವತ ನಿರ್ಭಂದಕಾಜ್ಞೆಗಾಗಿ ಸಲ್ಲಿಸಿರುತ್ತಾರೆ. ವಾದಿಯು ತಿಳಿಯಪಡಿಸುವುದೇನೆಂದರೆ ದಾವಾ ಸ್ವತ್ತು ವಾದಿಯ ಪಿತ್ರಾರ್ಜಿತ ಆಸ್ತಿಯಾಗಿರುತ್ತದೆ. ಸದರಿ ಆಸ್ತಿಯನ್ನು ವಾದಿ ಮತ್ತು ಅವರ ಸಹೋದರರು ಬಾಯಿ ಮಾತಿನ ಮೂಲಕ ವಿಭಾಗ ಮಾಡಿಕೊಂಡಿರುತ್ತಾರೆ. ದಾವಾ ಸ್ವತ್ತಿನ ಆರ್ ಆರ್ ವಾದಿಯ ತಾತ ಕಾಳೇಗೌಡನ ಸಿದ್ದೇಗೌಡನ ಮಗ ಅಂಕೇಗೌಡ ರವರ ಹೆಸರಿನಲ್ಲಿ ಇರುತ್ತದೆ. ವಾದಿಯ ತಾತ ಮತ್ತು ಅವರ ತಂದೆ ಅವಿದ್ಯಾವಂತರಾದ ಕಾರಣ ದಾವಾ ಆಸ್ತಿಯ ಆರ್ ಟಿ ಸಿ ಅವರ ಹೆಸರಿನಲ್ಲಿ ಬರುತ್ತಿದೀಯಾ ಅಥವಾ ಇಲ್ಲವಾ ಎಂಬುದು ಅವರಿಗೆ ಗೊತ್ತಿರುವುದಿಲ್ಲ. ಆದರೆ ಸುಮಾರು 100 ವರ್ಷಗಳಿಂದ ದಾವಾ ಆಸ್ತಿಯಲ್ಲಿ ವಾದಿಗಳೆ ಸ್ವಾಧೀನ ಮತ್ತು ಅನುಭವದಲ್ಲಿದ್ದಾರೆ. ವಾದಿಯು ಮುಂದುವರೆದು ತಿಳಿಯಪಡಿಸುವುದೇನೆಂದರೆ ದಾವಾ ಸ್ವತ್ತಿನ ಪಕ್ಕದಲ್ಲಿ ಸರ್ವೆ ನಂಃ 78/6 ರಲ್ಲಿ 1 ಎಕರೆ 7 ಗುಂಟೆ ಮತ್ತು ಸರ್ವೆ ನಂಃ 80/2 ರಲ್ಲಿ 13 ಗುಂಟೆ ವಾದಿಗೆ ಸೇರಿದ ಜಮೀನು ಇರುತ್ತದೆ. ಈ ಜಮೀನುಗಳ ಮಧ್ಯ ದಾವಾ ಆಸ್ತಿ ಇರುತ್ತದೆ. ಪ್ರತಿವಾದಿ 1 ರವರು ನಿವೃತ್ತ ಸರ್ಕಾರಿ ಪ್ರಾಧ್ಯಾಪಕರಾಗಿರುತ್ತಾರೆ. 2ನೇ ಪ್ರತಿವಾದಿ 1ನೆ ಪ್ರತಿವಾದಿಯ ಮಗನಾಗಿರುತ್ತಾರೆ. ದಾವಾ ಸ್ವತ್ತಿನ ಆರ್ ಟಿ ಸಿ ಪ್ರತಿವಾದಿಗಳ ಹೆಸರಿಗೆ ವರ್ಗಾವಣೆಯಾಗಿರುವುದು ವಾದಿಯ ಗಮನಕ್ಕೆ ಬಂದಿರುವುದಿಲ್ಲ. ವಾದಿಯ ಜಮೀನಿನ ಬಾಜುದಾರರನಾದ ಕುಳ್ಳೇಗೌಡ ಬಿನ್ ದ್ಯಾಪೇಗೌಡ ರವರು ತಮ್ಮ ಜಮೀನನ್ನು ಅಳತೆ ಮಾಡಿಸಲು ಕಂದಾಯ ಅಧಿಕಾರಿಗಳನ್ನು ಸ್ಥಳಕ್ಕೆ ಕರೆಯಿಸಿದ ಸಂದರ್ಭದಲ್ಲಿ ದಾವಾ ಸ್ವತ್ತು 1ನೇ ಪ್ರತಿವಾದಿಯ ಹೆಸರಿನಲ್ಲಿರುವುದು ವಾದಿಗೆ ತಿಳಿದು ಬಂದಿರುತ್ತದೆ. ಆ ಸಮಯದಲ್ಲಿ ಸದರಿ ಕುಳ್ಳೇಗೌಡ ರವರು 1ನೇ ಪ್ರತಿವಾದಿಗೆ ದಾವಾ ಸ್ವತ್ತನ್ನು ತನಗೆ ಮಾರಾಟ ಮಾಡು ಎಂದು ತಿಳಿಸಿರುತ್ತಾರೆ. ಆಗ 1ನೇ ಪ್ರತಿವಾದಿ ದಾವಾ ಸ್ವತ್ತನ್ನು ನಿಮಗೆ ಮಾರಾಟ ಮಾಡಿದರೆ ನನಗೆ ತೊಂದರೆ ಆಗುತ್ತದೆ ಎಂದು ಹೇಳಿರುತ್ತಾರೆ. ನಂತರ ವಾದಿ ಮುಂದುವರೆದು ತಿಳಿಯಪಡಿಸುವುದೇನೆಂದರೆ 1ನೇ ಪ್ರತಿವಾದಿ ದಿನಾಂಕ 28.06.2021 ರಂದು ದಾವಾ ಆಸ್ತಿಗೆ ಸಂಬಂಧಪಟ್ಟಂತೆ 2ನೇ ಪ್ರತಿವಾದಿ ಹೆಸರಿಗೆ ಸುಳ್ಳು ದಾನಪತ್ರವನ್ನು ಸೃಷ್ಠಿ ಮಾಡಿಕೊಟ್ಟಿರುತ್ತಾರೆ. ಸದರಿ ದಾನ ಪತ್ರವನ್ನು ದುರುಪಯೋಗಪಡಿಸಿಕೊಂಡು ಪ್ರತಿವಾದಿ 2 ರವರು ತನ್ನ ಹೆಸರಿಗೆ ದಾವಾ ಸ್ವತ್ತಿನ ದಾಖಲೆಗಳನ್ನು ವರ್ಗಾವಣೆ ಮಾಡಿಕೊಂಡು ಅದನ್ನು ಬೇರೆಯವರಿಗೆ ವರ್ಗಾವಣೆ ಮಾಡಲು ಪ್ರಯತ್ನಿಸುತ್ತಿದ್ದಾರೆ ಎಂಬುದಾಗಿ ತಿಳಿಸಿರುತ್ತಾರೆ.

**8.** ಪ್ರತಿವಾದಿಗಳು ತಿಳಿಯಪಡಿಸುವುದೇನೆಂದರೆ 1 ನೇ ಪ್ರತಿವಾದಿ ಅಣ್ಣೂರು ಗ್ರಾಮದ ವಾಸಿಯಾಗಿರುತ್ತಾರೆ. ಆತನಿಗೆ ಸರ್ವೆ ನಂ: 79 ರಲ್ಲಿ 6 ಗುಂಟೆ ಪಿತ್ರಾರ್ಜಿತವಾಗಿ ಬಂದಿರುವ ಆಸ್ತಿ ಇರುತ್ತದೆ. ಪ್ರತಿವಾದಿ 1 ರವರ ಯೋಗಕ್ಷೇಮವನ್ನು ಪ್ರತಿವಾದಿ 2 ರವರು ನೋಡಿಕೊಳ್ಳುತ್ತಿರುವ ಕಾರಣ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಮುಂದೆ ಯಾವುದೇ ವಿವಾದಗಳು ಉಂಟಾಗಬಾರದು ಎಂದು ಪ್ರತಿವಾದಿ 1 ರವರು ಸರ್ವೆ ನಂ: 79 ವಿಸ್ತೀರ್ಣ 6 ಗುಂಟೆ ಜಮೀನನ್ನು ಪ್ರತಿವಾದಿ 2 ರವರಿಗೆ ದಾನ ಪತ್ರವನ್ನು ಬರೆದುಕೊಟ್ಟಿರುತ್ತಾರೆ. ಪ್ರತಿವಾದಿ 1 ರವರು ಮುಂದುವರೆದು ತಿಳಿಯಪಡಿಸುವುದೇನೆಂದರೆ ನಾನು ಮತ್ತು ನನ್ನ ಕುಟುಂಬದ ಸದಸ್ಯರು ಸುಮಾರು 65 ವರ್ಷಗಳಿಂದ ಅಣ್ಣೂರು ಗ್ರಾಮದ ಸರ್ವೆ ನಂ: 79 ವಿಸ್ತೀರ್ಣ 6 ಗುಂಟೆಯಲ್ಲಿ ವ್ಯವಸಾಯ ಮಾಡಿಕೊಂಡು ಅದರಲ್ಲಿ ಸ್ವಾಧೀನ ಮತ್ತು ಅನುಭವದಲ್ಲಿರುತ್ತೇವೆ. 1 ನೇ ಪ್ರತಿವಾದಿಗೆ ವಯಸ್ಸಾದ ಕಾರಣ ಸದರಿ ಸ್ವತ್ತನ್ನು ತನ್ನ ಮಗ ಪ್ರತಿವಾದಿ 2 ರವರ ಹೆಸರಿಗೆ ದಿನಾಂಕ 28.06.2021 ನೇ ಇಸವಿಯಲ್ಲಿ ದಾನ ಪತ್ರವನ್ನು ಬರೆದು ದಿನಾಂಕ 06.07.2021 ನೇ ಇಸವಿಯಲ್ಲಿ ನೊಂದಣಿ ಮಾಡಿಸಿರುತ್ತಾರೆ. ಸದರಿ ದಾನ ಪತ್ರದಂತೆ ಪ್ರತಿವಾದಿ 2 ರವರ ಹೆಸರಿಗೆ ದಾವಾ ಆಸ್ತಿಗೆ ಸಂಬಂಧಪಟ್ಟ ಕಂದಾಯ ದಾಖಲೆಗಳು ಎಂ ಆರ್ ನಂ: 4/2021-22 ರಂತೆ ವರ್ಗಾವಣೆಯಾಗಿರುತ್ತವೆ. ಅಂದಿನಿಂದ ಪ್ರತಿವಾದಿ 2 ರವರು ದಾವಾ ಸ್ವತ್ತಿನಲ್ಲಿ ಸ್ವಾದೀನ ಮತ್ತು ಅನುಭವವನ್ನು ಹೊಂದಿರುತ್ತಾರೆ. ಪ್ರತಿವಾದಿಗಳು ಮುಂದುವರೆದು ತಿಳಿಯಪಡಿಸುವುದೇನೆಂದರೆ ತಹಶೀಲ್ದಾರವರು 1 ನೇ ಪ್ರತಿವಾದಿಯ ಮಗನಾದ 2 ನೇ ಪ್ರತಿವಾದಿಯ ಹೆಸರಿಗೆ ದಾವಾ ಆಸ್ತಿಯ ಖಾತೆಯನ್ನು ವರ್ಗಾವಣೆ ಮಾಡಿರುವ ಕ್ರಮವನ್ನು ಪ್ರಶ್ನಿಸಿ ವಾದಿ ಉಪವಿಭಾಗಾಧಿಕಾರಿಗಳ ನ್ಯಾಯಾಲಯ ಮಂಡ್ಯದಲ್ಲಿ ಆರ್ ಮಿಸ್ ನಂ: 495/2021 ರಂತೆ ಪ್ರಕರಣವನ್ನು ದಾಖಲಿಸಿರುತ್ತಾರೆ. ಉಪವಿಭಾಗಾಧಿಕಾರಿಗಳ ನ್ಯಾಯಾಲಯವು ದಿನಾಂಕ 07.02.2024 ರಂದು ಸದರಿ ಪ್ರಕರಣವನ್ನು ವಜಾಗೊಳಿಸಿರುತ್ತದೆ.

**9.** ವಾದಿ ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದಾಗ ಸರ್ವೆ ನಂ: 79 ರಲ್ಲಿ 6 ಗುಂಟೆ ಜಮೀನು ಬಿ ದೇವರಾಜು ಬಿನ್ ಬೋರಯ್ಯ ಎ ರವರ ಹೆಸರಿನಲ್ಲಿ ಆರ್ ಟಿ ಸಿ ಇರುತ್ತದೆ. ಎಂ ಆರ್ ನಂ: ಹೆಚ್-04/2021-22 ರಂತೆ ಸದರಿ ಆಸ್ತಿ ಪ್ರತಿವಾದಿ 2 ರವರ ಹೆಸರಿಗೆ ಮುಟೇಷನ್ ಅಂಗೀಕಾರವಾಗಿರುತ್ತದೆ. ದಾವಾ ಆಸ್ತಿ ವಾದಿಯ ಪಿತ್ರಾರ್ಜಿತ ಆಸ್ತಿ ಎಂದು ತೋರಿಸಲು ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಕೇವಲ ವಾದಿ ದಾವಾ ಆಸ್ತಿಗೆ ಸಂಬಂಧಿಸಿದ ಛಾಯಾಚಿತ್ರಗಳನ್ನು ಹಾಜರುಪಡಿಸಿರುತ್ತಾರೆ. ಸದರಿ ಛಾಯಾಚಿತ್ರಗಳನ್ನು ಪರಿಗಣಿಸಿ ವಾದಿ ದಾವಾ ಆಸ್ತಿಯ ಸ್ವಾಧೀನದಲ್ಲಿದ್ದಾರೆಂದು ಈ ಹಂತದಲ್ಲಿ ಪರಿಗಣಿಸಲು ಸಾಧ್ಯವಿಲ್ಲ. ಪ್ರತಿವಾದಿಗಳು ದಾವಾ ಆಸ್ತಿಗೆ ಸಂಬಂಧಿಸಿದ ಪಸಲು

ಪಹಣಿಯನ್ನು ಹಾಜರುಪಡಿಸಿದ್ದು, ಅದನ್ನು ನೋಡಿದಾಗ ಸರ್ವೆ ನಂ: 79 ವಿಸ್ತೀರ್ಣ 6 ಗುಂಟೆ ಜಮೀನು ಪ್ರತಿವಾದಿ 1 ರವರ ಹೆಸರಿನಲ್ಲಿ ಇರುತ್ತದೆ. 1989 ರಿಂದ 1994 ರ ಕೈಬರಹದ ಆರ್ ಟಿ ಸಿ ಗಳನ್ನು ಹಾಜರುಪಡಿಸಿದ್ದು, ಸದರಿ ಆರ್ ಟಿ ಸಿ ಗಳು ಪ್ರತಿವಾದಿ 1 ರವರ ಹೆಸರಿನಲ್ಲಿದ್ದು ಅವರು ದಾವಾ ಆಸ್ತಿಯ ಸ್ವಾಧೀನದಲ್ಲಿದ್ದಾರೆ ಎಂಬುದು ನಮೂದು ಇರುತ್ತದೆ. ದಾವಾ ಆಸ್ತಿಗೆ ಸಂಬಂಧಿಸಿದ ಕರ್ನಾಟಕ ರಿವಿಜನ್ ಸೆಟಲ್ ಮೆಂಟ್ ಆಕಾರ ಬಂದ್ ನ್ನು ಹಾಜರುಪಡಿಸಿರುತ್ತಾರೆ. ಅದರಲ್ಲಿ ಸರ್ವೆ ನಂ: 79 ರಲ್ಲಿ 6 ಗುಂಟೆ ಜಮೀನು ಇರುವ ಬಗ್ಗೆ ನಮೂದು ಇರುತ್ತದೆ. ಪ್ರತಿವಾದಿ 1 ರವರು ಪ್ರತಿವಾದಿ.2 ರವರ ಹೆಸರಿಗೆ ದಿನಾಂಕ 28.06.2021 ರಂದು ದಾವಾ ಆಸ್ತಿಗೆ ಸಂಬಂಧಿಸಿದಂತೆ ದಾನ ಪಾತ್ರವನ್ನು ಬರೆದುಕೊಟ್ಟಿರುತ್ತಾರೆ, ಸದರಿ ದಾನ ಪತ್ರದ ಅನ್ವಯ ಪ್ರತಿವಾದಿ 2 ರವರ ಹೆಸರಿಗೆ ಎಂ ಆರ್ ನಂ: ಹೆಚ್-4 ಪ್ರಕಾರ ಮುಟೇಷನ್ ಅಂಗೀಕಾರವಾಗಿರುತ್ತದೆ. ಸದರಿ ಮುಟೇಷನ್ ಅನ್ವಯ ಪ್ರತಿವಾದಿ 2 ರವರ ಹೆಸರಿಗೆ ಆರ್ ಟಿ ಸಿ ವರ್ಗಾವಣೆಯಾಗಿರುತ್ತದೆ. ಪ್ರತಿವಾದಿ 2 ರವರು ದಾವಾ ಆಸ್ತಿಗೆ ಸಂಬಂಧಪಟ್ಟ ಛಾಯಾಚಿತ್ರಗಳನ್ನು ಹಾಜರುಪಡಿಸಿರುತ್ತಾರೆ. ಸದರಿ ಛಾಯಾಚಿತ್ರಗಳಲ್ಲಿ ಪ್ರತಿವಾದಿ 2 ರವರು ಭತ್ತವನ್ನು ದಾವಾ ಆಸ್ತಿಯಲ್ಲಿ ಬೆಳೆದಿರುವುದು ಕಂಡು ಬರುತ್ತದೆ.

**10.** ಪ್ರತಿವಾದಿ 2 ರವರ ಹೆಸರಿಗೆ ದಾನ ಪತ್ರದ ಅನ್ವಯ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಮುಟೇಷನ್ ಅಂಗೀಕಾರಿವಾಗಿರುವುದನ್ನು ಪ್ರಶ್ನಿಸಿ ವಾದಿ ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಆರ್ ಮಿಸ್ ನಂ: 495/2021 ನ್ನು ದಾಖಲು ಮಾಡಿರುತ್ತಾರೆ. ಸದರಿ ಪ್ರಕರಣ ದಿನಾಂಕ 07.02.2024 ರಂದು ವಜಾಗೊಂಡಿರುತ್ತದೆ. ಸದರಿ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಎಲ್ಲಾ ದಾಖಲೆಗಳನ್ನು ಪರಿಶೀಲಿಸಿದಾಗ ವಾದಿ ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿ ಇರುವ ಬಗ್ಗೆ ಯಾವುದೇ ದಾಖಲೆಗಳು ಸದ್ಯಕ್ಕೆ ಕಂಡು ಬರುತ್ತಿಲ್ಲ. ಆದರೆ ಪ್ರತಿವಾದಿಗಳು ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದಾಗ ಪ್ರತಿವಾದಿಗಳು ದಾವಾ ಆಸ್ತಿಯಲ್ಲಿ ಸ್ವಾಧೀನದಲ್ಲಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ. ಒಂದು ವೇಳೆ ಈ ಅರ್ಜಿಯನ್ನು ಪುರಸ್ಕರಿಸಿದರೆ ವಾದಿಗಿಂತ ಪ್ರತಿವಾದಿಗಳಿಗೆ ತುಂಬಲಾರದ ನಷ್ಟ ಉಂಟಾಗುತ್ತದೆ. ಪ್ರತಿವಾದಿಗಳು ಮೇಲ್ನೋಟಕ್ಕೆ ಸಮ್ಮತವಾದ ವಾದವನ್ನು ಮಂಡಿಸಿರುತ್ತಾರೆ. ಅನುಕೂಲತೆಯ ಒಲವು ಪ್ರತಿವಾದಿಗಳ ಪರವಾಗಿರುತ್ತದೆ. ಈ ಅರ್ಜಿಯನ್ನು ಪುರಸ್ಕರಿಸಲು ವಾದಿಯು ಯಾವುದೇ ಸಕಾರಣಗಳನ್ನು ತಿಳಿಸಿರುವುದಿಲ್ಲ. ಆದ್ದರಿಂದ ಈ ನ್ಯಾಯಾಲಯ ಅಂಶ 1 ರಿಂದ 3 ನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿದೆ.

**11.** <u>ಅಂಶ ನಂಃ **4**ಃ-</u> ಮೇಲ್ಕಂಡ 1 ರಿಂದ 3 ನೇ ಅಂಶದಲ್ಲಿ ಚರ್ಚಿಸಲಾದಂತೆ ಈ ಕೆಳಕಂಡ ಃ

<u>ಆದೇಶ</u>

ವಾದಿಯು ಸಲ್ಲಿಸಿರುವ ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ ***39*** ನಿಯಮ ***1*** ಮತ್ತು ***2*** ಸಹವಾಚಕ ಕಲಂ ***151*** ನ್ನು ಖರ್ಚು ಸಮೇತ ವಜಾಗೊಳಿಸಲಾಗಿದೆ.

(ಆದೇಶವನ್ನು ಶೀಘ್ರಲಿಪಿಗಾರರಿಗೆ ಉಕ್ತಲೇಖನ ನೀಡಿ, ಅವರು ಲಿಪ್ಯಂತರಿಸಿ, ಗಣಕೀಕೃತವಾದ ನಂತರ ತಿದ್ದುಪಡಿ ಮಾಡಿ, ತೆರೆದ ನ್ಯಾಯಾಲಯದಲ್ಲಿ ದಿನಾಂಕ **22** ನೇ ಜನವರಿ **2025** ರಂದು ಘೋಷಿಸಲಾಯಿತು)

(ಕೋನಪ್ಪ ಎನ್ ವಿ)
2 ನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಮದ್ದೂರು.